**ದಿಃ07.07.2056 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಆರೋಪಿಪರ ವಕೀಲರಿಂದಃ**

ಆರೋಪಿ ತಮ್ಮ ಮನೆಯನ್ನು ಲೀಸ್ ಗೆ ನೀಡಿದ್ದು ಸದರಿ ಲೀಸ್ ನಿಂದ ಮನೆ ಬಿಡಿಸಿಕೊಳ್ಳಲು ಅವರು ನನ್ನನಿಂದ ಸಾಲ ಪಡೆದು ಕೊಂಡಿದ್ದರು. ಈ ಬಗ್ಗೆ ಪಿರ್ಯಾದಿನಲ್ಲಿ ಬರೆಸಿರುವುದಿಲ್ಲ. ತನಗೆ ಸಾಲ ಬೇಕೆಂದು ಆರೋಪಿಯು 2002 ರಲ್ಲಿ ತನ್ನ ಬಳಿ ಕೇಳಿದ್ದರು. ಆರೋಪಿಯು ತಮ್ಮ ಮನೆಯನ್ನುಲೀಸ್ ನಿಂದ ಬಿಡಿಸಿಕೊಳ್ಳಲು ಯಾವತ್ತು ನನ್ನ ಬಳಿ ಸಾಲ ಕೇಳಿರಲಿಲ್ಲ ಮತ್ತು ನಾನು ಆರೋಪಿಗೆ ಯಾವುದೇ ಸಾಲ ನೀಡಿರುವುದಿಲ್ಲ ಅಂದರೆ ಸರಿಯಲ್ಲ. ನಾನು 2022 ರ ಅಕ್ಟೋಬರ್ ನಲ್ಲಿ ರೂ.4 ಲಕ್ಷವನ್ನು ಆರೋಪಿಗೆ ನಗದಾಗಿ ನೀಡಿರುತ್ತೇನೆ. ನನಗೆ ಬಂಗಾರದ ಅಂಗಡಿ ಇದ್ದು ವ್ಯಾ ಪಾರ ದಿಂದ ಬಂದ ಹಣದಿಂದ ಆರೋಪಿಗೆ ರೂ.04 ಲಕ್ಷವನ್ನು ನೀಡಿರುತ್ತೇನೆ. ಈ ಬಗ್ಗೆ ಪಿರ್ಯಾದಿನಲ್ಲಿ ಬರೆಸಿರುವುದಿಲ್ಲ.

ಪಿರ್ಯಾದಿನಲ್ಲಿ ನನ್ನ ಉದ್ಯೋಗ ಅಕ್ಕಸಾಲಿಗನೆಂದು ಬರೆಸಿರುತ್ತೇನೆ. ಸಾಕ್ಷೀಗೆ ಪಿರ್ಯಾದನ್ನು ತೋರಿಸಿ ಅದರಲ್ಲಿ ಅವರ ಉದ್ಯೋಗ ವ್ಯವಹಾರ ಎಂದು ನಮೂದಿಸಿರಲಾಗಿರುತ್ತದೆ ಎಂದು ಸೂಚಿಸಿದಾಗ ಸಾಕ್ಷೀಯು ಹೌದು ಎನ್ನುತ್ತಾರೆ. ನಾನು ಅಕ್ಕಸಾಲಿಗನೆಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ.

ಆರೋಪಿಯು ನನಗೆ ಚೆಕ್ ನ್ನು ದಿಃ21.12.2023 ರಂದು ನನ್ನ

ಅಂಗಡಿಗೆ ಬಂದು ನೀಡಿರುತ್ತಾರೆ. ಆರೋಪಿಯು ನನ್ನ ಅಂಗಡಿಗೆಬಂದು ಚೆಕ್ ನೀಡಿರುತ್ತಾರೆಂದು ಪಿರ್ಯಾದಿನಲ್ಲಿ ಬರೆಸಿರುವುದಿಲ್ಲ. ಸದರಿ ಚೆಕ್ ನ್ನು ನಾನು ಎರಡು ದಿನಗಳ ನಂತರ State bank of Alnavar ಗೆ ಹಾಜರು ಪಡಿಸಿರುತ್ತೇನೆ. ನನಗೆ ಕೆನರಾ ಬ್ಯಾಂಕಿನಲ್ಲಿ ಖಾತೆ ಇರುತ್ತದೆ. ಆರೋಪಿ ನೀಡಿದ ಚೆಕ್ಕನ್ನು ಕೆನರಾ ಬ್ಯಾಂಕ ಖಾತೆಗೆ ಹಾಕಬೇಕಾಗಿತ್ತು ಎಂಬ ಸೂಚನೆಗೆ ಸಾಕ್ಷೀಯು ಕೆನರಾ ಬ್ಯಾಂಕ್‌ಗೆ ಚೆಕ್ ನ್ನು ಹಾಕಿರುವುದಿಲ್ಲ ಮತ್ತು ತಮಗೆ State bank of Alnavar ದಲ್ಲಿ ಖಾತೆ ಇರುವುದಾಗಿ ನುಡಿಯುತ್ತಾರೆ. ನಾನು ಚೆಕ್ಕನ್ನು ಹಾಜರು ಪಡಿಸಿದ ದಿನವೇ ಆರೋಪಿಯ ಖಾತೆಯಲ್ಲಿಸಾಕಷ್ಟು ಹಣವಿಲ್ಲ ಎಂದು ಚೆಕ್ ನ್ನು ಹಿಂತಿರುಗಿಸಿರುತ್ತಾರೆ. ನಾನು ಚೆಕ್ ನ್ನು ಬೆಳಗ್ಗೆ 10.30 ರಿಂದ 11.00 ಗಂಟೆ ಸಮಯದಲ್ಲಿ ಬ್ಯಾಂಕಿಗೆ ಹಾಜರು ಪಡಿಸಿರುತ್ತೇನೆ. ನಿ.ಪಿ.02 ರಲ್ಲಿ funds insufficient ಎಂಬಲ್ಲಿ ಟಿಕ್ ಹಾಕಿರುವಂತೆ Drawers signature incomplete/illegible/differs/required ಎಂಬಲ್ಲಿ ಟಿಕ್ ಹಾಕಿರುತ್ತಾರೆಂದರೆ ಸರಿ. ನಿ.ಪಿ.02 ರಲ್ಲಿ Drawers signature incomplete ಎಂದು ಇರುವ ಬಗ್ಗೆ ಪಿರ್ಯಾದಿನಲ್ಲಿ ಹೇಳಿರುವುದಿಲ್ಲ. ಆರೋಪಿಯ ಖಾತೆಗೆ ಸಂಬಂಧಿಸಿದ ಅವರ ಸಹಿ ಮತ್ತು ನಿ.ಪಿ.01-ಚೆಕ್ ನಲ್ಲಿನ ಸಹಿ ವ್ಯತ್ಯಾಸ ಆಗಿದ್ದರಿಂದ ನಿ.ಪಿ.02 ರಲ್ಲಿ Drawers signature incomplete/illegible/differs/required ಎಂಬಲ್ಲಿ ಟಿಕ್ ಹಾಕಿರುತ್ತಾರೆಂದರೆ ಸರಿ. ನಿ.ಪಿ.01 ರಲ್ಲಿರುವ ಸಹಿ ಆರೋಪಿಯ ಸಹಿ ಆಗಿರದ

ಕಾರಣ ಆರೋಪಿಯ ಖಾತೆಗೆ ಸಂಬಂದಿಸಿದ ಸಹಿ ಮತ್ತು ನಿ.ಪಿ.01 ರಲ್ಲಿನ ಸಹಿಯಲ್ಲಿ ವ್ಯತ್ಯಾಸ ಇರುವುದರಿಂದ ನಿ.ಪಿ.02 ರಲ್ಲಿ Drawers signature incomplete/illegible/differs/required ಎಂದು ಹಿಂಬಹ ನೀಡಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿಗೆ ನಿ.ಪಿ.01 ರಲ್ಲಿ ನ ಸಹಿ ಮತ್ತು ಆರೋಪಿಯ plea ನಲ್ಲಿನ ಸಹಿಯನ್ನು ತೋರಿಸಿ ಅವುಗಳಲ್ಲಿ ವ್ಯತ್ಯಾಸ ಇರುವುದಾಗಿ ಆರೋಪಿ ಪರ ವಕೀಲರು ಸೂಚಿಸಿದಾಗ ಸಾಕ್ಷೀಯು ಇಲ್ಲ ಎನ್ನುತ್ತಾರೆ. ಆರೋಪಿ ಯಾವುದೆ ಚೆಕ್ಕನ್ನು ಸಹಿ ಮಾಡಿ ನನಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ದಿಃ21.12.2023 ರಂದು ನಾನು ಆರೋಪಿಗೆ ವಕೀಲರ ಮೂಲಕ ನೋಟಿಸನ್ನು ಕಳುಹಿಸಿರುತ್ತೇನೆ. ಸದರಿ ನೋಟಿಸು ಆರೋಪಿಗೆ ತಲುಪಿದ ಬಗ್ಗೆ ಹಿಂಬರವನ್ನು ಹಾಜರು ಪಡಿಸಿರುವುದಿಲ್ಲ. ನಾನು ಆರೋಪಿಗೆ ಯಾವುದೇ ನೋಟಿಸು ನೀಡಿದೆ ಇದ್ದರೂ ನೀಡಿರುವುದಾಗಿ ಸುಳ್ಳುಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಬಂಗಾರದ ವ್ಯವಹಾರವನ್ನು ನಗದು ಮೂಲಕವೂ, ಬ್ಯಾಂಕ ಮೂಲಕವು ಮಾಡುತ್ತೇವೆ. ನಾನು ಆದಾಯ ತೆರಿಗೆ ಪಾವತಿದಾರನಾಗಿರುತ್ತೇನೆ. ಆ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ಸದರಿ ದಾಖಲೆ ಗಳನ್ನು ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಆ ರೀತಿ ನೀವು ಆದಾಯ

ತೆರಿಗೆ ತುಂಬಿದಲ್ಲಿ ಆ ಬಗ್ಗೆ ದಾಖಲೆ ಹಾಜರುಪಡಿಸುತ್ತಿದ್ದೀರಿ ಎಂಬ ಸೂಚನೆಗೆ ಸಾಕ್ಷೀಯು ಆದಾಯ ತೆರಿಗೆಯನ್ನು ತಮ್ಮೊಂದಿಗೆ ವ್ಯಾಪಾರ ನಡೆಸುತ್ತಿರುವ ತಮ್ಮ ಅಣ್ಣನ ಮಗನಾಗಿ ಓಂಕಾರ ರವರ ಹೆಸರಿನಲ್ಲಿ ಕಟ್ಟುತ್ತಿರುವುದಾಗಿ ನುಡಿಯುತ್ತಾರೆ. ಈ ಬಗ್ಗೆ ದಾಖಲೆಯನ್ನು ಹಾಜರು ಪಡಿಸಬಹುದು. ಆರೋಪಿ ಮತ್ತು ಸದರಿ ಓಂಕಾರ ನಡುವೆ ವ್ಯವಹಾರ ಇದ್ದು ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣದ ವ್ಯವಹಾರ ಇರುವುದಿಲ್ಲ ಅಂದರೆ ಸರಿಯಲ್ಲ. ಓಂಕಾರ ರವರಿಂದ ಪಡೆದುಲಕೂಂಡ ಸಾಲವನ್ನು ಆರೋಪಿ ತೀರಿಸಿ ಚೆಕ್ ಹಿಂತಿರುಗಿಸುವಂತೆ ಕೇಳಿದಾಗ ಓಂಕಾರ ರವರು ನನ್ನ ಮೂಲಕ ಪ್ರಸ್ತುತ ಫಿರ್ಯಾದು ಹಾಗೂ ಇನ್ನೊಂದು ಫಿರ್ಯಾದನ್ನು ಸಲ್ಲಿಸಿರುತ್ತಾರೆಂದರೆ ಸರಿಯಲ್ಲ. ಆರೋಪಿ ನನ್ನನಿಂದ ಯಾವುದೇ ಸಾಲ ಪಡೆದುಕೊಳ್ಳದಿದ್ದರೂ, ನಿ.ಪಿ.01 ಕ್ಕೆ ಸಹಿ ಮಾಡದೇನೀಡದೆ ಇದ್ದರೂ ಸಹಿ ಮಾಡಿ ಚೆಕ್ ನ್ನು ನೀಡಿರುದಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಓಂಕಾರ ಮತ್ತು ಆರೋಪಿಯ ನಡುವಿನ ವ್ಯವಹಾರ ಮುಕ್ತಾಯವಾದರು ಚೆಕ್ ನ್ನು ಆರೋಪಿಗೆ ಹಿಂತಿರುಗಿಸದೆ ಅವರ ವಿರುದ್ಧ ಸುಳ್ಳು ಫಿರ್ಯಾದಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ - ಇಲ್ಲ.**

(ತೆರೆದ ನ್ಯಾಯಲಯದಲ್ಲಿ ಬೆರಳಚ್ಚುಗಾರರು ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸ. ಇದೆ.**

**3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.**